ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ,
ಸಿ.ಸಿ. ನಂ.ಃ 305/2020

.....................................................................

CW 02
PW 03

| | | |
|---|---|---|
| ಹೆಸರು | ಃ | ನಾಗಾರಾಜ ದೊಡ್ಡಮನಿ |
| ತಂದೆಯ ಹೆಸರು | ಃ | ಕೃಷ್ಣಪ್ಪ |
| ವಯಸ್ಸು | ಃ | 39 ವರ್ಷ |
| ಉದ್ಯೋಗ | ಃ | ಕೂಲಿ ಕೆಲಸ |
| ವಾಸಸ್ಥಳ | ಃ | ತಟ್ಟಿಗೇರಿ. |

ದಿನಾಂಕ 16-12-2025 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ಚಾಸಾ 1, 3, 5 ರಿಂದ 10 ರವರು ಪರಿಚಯ ಇದ್ದಾರೆ. ಚಾಸಾ 4 ರವರ ಪರಿಚಯ ಇಲ್ಲ. ಚಾಸಾ 3 ರವರು ಈಗ ಮರಣ ಹೊಂದಿರುತ್ತಾರೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ಅಪಘಾತದ ಸ್ಥಳದ ಪಂಚನಾಮೆಯನ್ನು ಈಗಾಗಲೇ ನಿಪಿ 4 ಎಂದು ಗುರುತಿಸಲಾಗಿದ್ದು, ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ **ನಿಪಿ 4 ಬಿ ಎಂದು** ಗುರುತಿಸಲಾಯಿತು. ಸದರಿ ಸಹಿಯನ್ನು 4 ವರ್ಷಗಳ ಹಿಂದೆ ಗೋರಿಖಾನ ಪೆಟ್ರೋಲ್ ಬಂಕ್ ಹತ್ತಿರ ಮಾಡಿರುತ್ತೇನೆ. ಅಲ್ಲಿ ಬಸ ಮತ್ತು ಮೋಟಾರ ಸೈಕಲ್ ನಡುವೆ ಅಪಘಾತವಾಗಿ ಮಂಜು ಮಿರಾಶಿ ಮತ್ತು ಶಿವಾನಂದ ಇಬ್ಬರು ಮರಣ ಹೊಂದಿದ್ದರು. ಸಾಕ್ಷಿಗೆ ಒಂದು ನಿಪಿ 1 ಅನ್ನು ತೋರಿಸಲಾಗಿ ಅದರಲ್ಲಿ ತಾವು ಇರುವುದಾಗಿ ಮತ್ತು ಆ ಸಮಯದಲ್ಲಿ ಪೊಲೀಸರು ಅಲ್ಲಿ ಮರಣ ಹೊಂದಿದ ಬಗ್ಗೆ ಮತ್ತು ಅಪಘಾತವಾದ ಬಗ್ಗೆ ಬರೆದುಕೊಂಡು ನನ್ನ ಸಹಿ ಪಡೆದರು. ನಿಪಿ 1 ರಲ್ಲಿ ಚಾಸಾ 10, ನಾನು ಮತ್ತು ಪೊಲೀಸರು ಇರುತ್ತೇವೆ ಎನ್ನುತ್ತಾರೆ. ಚಾಸಾ 1 ರವರು ನಿಪಿ 1 ರಲ್ಲಿ ಇರುವುದಿಲ್ಲ ಎನ್ನುತ್ತಾರೆ. ಸದರಿ ಪಂಚನಾಮೆಯನ್ನು ಮಧ್ಯಾಹ್ನ 01-00 ಗಂಟೆಗೆ ಮಾಡಿರುತ್ತಾರೆ.

ಸಾಕ್ಷಿಗೆ ನಿಪಿ 5 ರಿಂದ 8 ಅನ್ನು ತೋರಿಸಲಾಗಿ ಅದರಲ್ಲಿ ತಾವು ಇರುವುದಾಗಿ ನುಡಿಯುತ್ತಾರೆ.

ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದು ಶವ ಪಂಚನಾಮೆಯನ್ನು ಆಗಿದ್ದು, ಶವ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಶವ ಪಂಚನಾಮೆಯನ್ನು **ನಿಪಿ 9 ಎಂದು,** ಸಾಕ್ಷಿಯ ಸಹಿಯನ್ನು **ನಿಪಿ 9 ಎ ಎಂದು** ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಹಳಿಯಾಳ ಸರ್ಕಾರಿ ಆಸ್ಪತ್ರೆಯಲ್ಲಿ ಮಂಜು ಮಿರಾಶಿ ಮತ್ತು ಶಿವಾನಂದ ರವರ ಶವ ಪರಿಶೀಲನೆ ಮಾಡಿ ಮಾಡಲಾಗಿದೆ ಎನ್ನುತ್ತಾರೆ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**<u>ಪಾಟೀ ಸವಾಲು :</u> ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ದಿನಾಂಕ 24-01-2020 ರಂದು ಗೋರೆಖಾನ್ ಪೆಟ್ರೋಲ್ ಪಂಪ ಹತ್ತಿರ ಮೋಟರ ಸೈಕಲ್ ನಂಬರ ಕೆಎ-65-ಇ-6268 ಮತ್ತು ಕೆ ಎಸ್ ಆರ್ ಟಿ ಸಿ ಬಸ ನಂಬರ ಕೆಎ-62-ಎಫ-1286 ರ ನಡುವೆ ಅಪಘಾತವಾಗಿತ್ತು. ಮೋಟಾರ ಸೈಕಲ್ ಮತ್ತು ಸದರಿ ಬಸ್ ಜಾಗದಲ್ಲಿಯೇ ಇದ್ದವು. ಸದರಿ ಅಪಘಾತ ಜಾಗವನ್ನು ಪರಿಶೀಲನೆ ಮಾಡಿ ಘಟನಾ ಜಾಗದ ಪಂಚನಾಮೆಯನ್ನು ಚಾಸಾ 3 ಮತ್ತು ನಿಮ್ಮ ಸಮಕ್ಷಮ ಸಂಜೆ 05-00 ರಿಂದ 06-00 ಗಂಟೆಯ ವರೆಗೆ ಜರುಗಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದ ಆ ದಿನ ಅಪಘಾತ ಮಧ್ಯಾಹ್ನ 01-00 ಗಂಟೆಗೆ ಆಗಿತ್ತು ಎನ್ನುತ್ತಾರೆ. ಅದೇ ದಿನ ಪೊಲೀಸರು ಹಳಿಯಾಳ ಸರ್ಕಾರಿ ಆಸ್ಪತ್ರೆಯಲ್ಲಿ ನಿಮ್ಮ ಮತ್ತು ಚಾಸಾ 3 ರವರ ಸಮಕ್ಷಮ ಶವ ಪಂಚನಾಮೆಯನ್ನು ಜರುಗಿಸಿ ನಿಮ್ಮಿಂದ ಸಹಿ ಪಡೆದರು ಎಂದರೆ ಸರಿ. ಅಪಘಾತಗೊಂಡ ಬಸ್ ಮತ್ತು ಮೋಟಾರ ಸೈಕಲ್ ಅನ್ನು ನೋಡಿದರೆ ಗುರುತಿಸುತ್ತೇನೆ.

**<u>ಪಾಟೀ ಸವಾಲುಃ</u>** ಆರೋಪಿ ಪರ ಶ್ರೀ ಎಸ್ ವಾಯ್ ಜಿ ವಕೀಲರಿಂದ.

ನಿಪಿ 1 ರಲ್ಲಿ ಬಸ್ ನ ಸಂಖ್ಯೆ ಕಂಡು ಬರುವುದಿಲ್ಲ ಎಂದರೆ ಸರಿ. ಬಸ್ ಸಂಖ್ಯೆ ಇಲ್ಲದೇ ಇದೇ ವಾಹನ ಎಂದು ಗುರುತಿಸಲು ಆಗುವುದಿಲ್ಲ ಎಂದರೆ ಸರಿ. ನಿಪಿ 1 ರಲ್ಲಿ ಚಾಸಾ 1 ರವರು ಕಂಡು ಬರುವುದಿಲ್ಲ ಎಂದರೆ ಸರಿ. ಪೊಲೀಸರು ಎಲ್ಲಾ ಬರೆದ ನಂತರ ನಿಮ್ಮ ಸಹಿ ಪಡೆದಿರುತ್ತಾರೆ .

ಅದರಲ್ಲಿ ಬರೆದ ವಿಷಯಗಳು ನಿಮಗೆ ಗೊತ್ತಿಲ್ಲ ಎಂದರೆ ಸರಿ. ಆಸ್ಪತ್ರೆಯಲ್ಲಿಯೂ ಸಹ ಪೊಲೀಸರು ಎಲ್ಲಾ ಬರೆದ ನಂತರ ನಿಮ್ಮ ಸಹಿ ಪಡೆದಿರುತ್ತಾರೆ . ಅದರಲ್ಲಿ ಬರೆದ ವಿಷಯಗಳು ನಿಮಗೆ ಗೊತ್ತಿಲ್ಲ ಎಂದರೆ ಸರಿ. ನೀವು ನಿಮ್ಮ ಊರಿನವರಿಗೆ ಅನುಕೂಲ ಆಗಲೆಂದು ನಾನು ಘಟನಾ ಜಾಗಕ್ಕೆ ಹೋಗಿದ್ದೆ, ಪಂಚನಾಮೆ ಜರುಗಿಸಿದರು ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದಿದ್ದರೂ ಸಹ ಪೊಲೀಸರು ಬರೆದುಕೊಂಡಂತಹ ದಾಖಲೆಗೆ ಸಹಿ ಮಾಡಿರುತ್ತೀರಿ ಎಂದರೆ ಸರಿ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.